OS.34/2023

PW-2

ದಿನಾಂಕಃ 23-09-2024 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ದಾವಾಸ್ತಿಯ ಸಂಖ್ಯೆಯಾಗಲೀ ವಿಸ್ತೀರ್ಣವಾಗಲೀ ಚೆಕ್ಕು ಬಂದಿಯಾಗಲೀ ತಿಳಿದಿದೆಯೇ ಎಂದರೆ ಸಾಕ್ಷಿ ಚೆಕ್ಕು ಬಂದಿ ಗೊತ್ತು ಎಂದು ನುಡಿಯುತ್ತಾರೆ. ಪೂರ್ವಕ್ಕೆ ವಾದಿಗೆ ಸೇರಿದ ಜಾಗ , ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ಸಿದ್ದಲಿಂಗಪ್ಪ ನವರ ಮನೆ , ದಕ್ಷಿಣಕ್ಕೆ ಹೊಂಡದ ಜಾಗ. ಈ ಗ ನಾನು ಹೇಳಿದ ಚೆಕ್ಕು ಬಂದಿಯ ಜಾಗದಲ್ಲಿ ವಾದಿಯ ಅಜ್ಜ ಅನುಭವದಲ್ಲಿದ್ದಾರೆ. ಈಗ ನಾನು ಹೇಳಿದ ಚೆಕ್ಕು ಬಂದಿಯ ಒಳಗಿನ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಹೇಳಿರುತ್ತೇನೆ. ನಾನು ಮೇಲೆ ಹೇಳಿರುವ ಚೆಕ್ಕು ಬಂದಿಯ ವಿವರವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಪ್ರತಿವಾದಿಗಳು ಯಾರು ಎಂದು ನನಗೆ ಗೊತ್ತಿಲ್ಲ.

1ನೇ ಪ್ರತಿವಾದಿಯ ಗಂಡನಾದ ಜಯಪ್ಪನ ತಂದೆಯ ಹೆಸರು ಏನು ಎಂದು ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ನನಗೆ ಪ್ರತಿವಾದಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

ಪಾಡುಗೆರೆ ನಂಜುಂಡಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಸದಿರಿ ಪಾಡುಗೆರೆ ನಂಜುಂಡಪ್ಪ ಮತ್ತು ಜಯಪ್ಪ ರವರು ಮೂಲತಃವಾಗಿ ಸಂತೇಬೆನ್ನೂರು ವಾಸಿಗಳು ಎಂದರೆ ಸಾಕ್ಷಿ ಜಯಪ್ಪ ಗೊತ್ತು ನಂಜುಂಡಪ್ಪ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಯಪ್ಪ ನವರು ಮೃತಪಟ್ಟಿರುತ್ತಾರೆ ಯಾವಾಗ ಎಂದು ನನಗೆ ಗೊತ್ತಿಲ್ಲ. ಸದರಿ ಜಯಪ್ಪ ಮತ್ತು ನನಗೆ ಚಿಕ್ಕಂದಿನಿಂದಲೂ ಸ್ನೇಹವಿತ್ತು ಎಂದರೆ ಕಳೆದ ಮೂವತ್ತು ವರುಷಗಳಿಂದ ಪರಿಚಯವಿದೆ ಎಂದು ನುಡಿಯುತ್ತಾರೆ. ನಾನು ಜಯಪ್ಪ ನವರು ವಾಸವಿದ್ದ ಮನೆ ನೋಡಿರುತ್ತೇನೆ. ಸದರಿ ಜಯಪ್ಪ ನವರು ವಾಸವಿದ್ದ ಮನೆ ವಿಚಾರ ನನಗೆ ಸುಮಾರು 10-15 ವರುಷಗಳ ಹಿಂದಿನಿಂದ ಅಷ್ಟೇ ಗೊತ್ತು.

ಹಾಗಾಗಿ ಸದರಿ ಆಸ್ತಿಯಲ್ಲಿ ಜಯಪ್ಪ ಯಾವ ದಾಖಲೆಗಳ ಆಧಾರದ ಮೇಲೆ ಅನುಭವದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ತಿಳಿದಂತೆ ಜಯಪ್ಪ ಮತ್ತು ಆತನ ತಂದೆ ಚಿಕ್ಕಂದಿನಿಂದಲೂ ಸಂತೆಬೆನ್ನೂರಿನಲ್ಲೇ ವಾಸವಾಗಿದ್ದರು ಎಂದರೆ ಸರಿ. ಪ್ರಸ್ತುತ ಜಯಪ್ಪ ವಾಸವಿದ್ದ ಮನೆಯಲ್ಲಿ ಆತನ ವಾರಸುದಾರರು ವಾಸವಾಗಿದ್ದಾರೆ ಎಂ ದರೆ ನನಗೆ ಗೊತ್ತಿಲ್ಲ . ಹಾಗಾಗಿ ಸದರಿ ಮನೆಯಲ್ಲಿ ಈಗ ಯಾರು ವಾಸವಿದ್ದಾರೆ ಅಥವಾ ಖಾಲಿ ಇದೆಯೋ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ದಾವಾಸ್ತಿಯ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡದ ಕಾರಣ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ದಾವಾಸ್ತಿ ವಾದಿಗೆ ಸೇರಿದ್ದು ಎಂದು ಹೇಳಲು ನಾನು ಯಾವುದೇ ದಾಖಲೆ ನೋಡಿಲ್ಲ ಆದರೆ ವಾದಿ ದಾವಾಸ್ತಿಯಲ್ಲಿ ವಾಸವಿರುವುದು ಅಷ್ಟೇ ಗೊತ್ತು. ದಾವಾಸ್ತಿಯನ್ನು 1 ನೇ ಪ್ರತಿವಾದಿಯ ಗಂಡನಿಗೆ ಯಾವ ವರ್ಷದಿಂದ ವಾಸವಿರಲು ಕೊಟ್ಟಿದ್ದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ಸಮಕ್ಷಮ ಸದರಿ ಜಯಪ್ಪ ನಿಗೆ ವಾಸವಿರಲು ದಾವಾಸ್ತಿಯನ್ನು ಕೊಟ್ಟಿಲ್ಲ ವಾದಿಯ ಅಜ್ಜ ಹನುಮಂತಪ್ಪ ನ ಹೇಳಿಕೆ ಮೇರೆಗೆ ಗೊತ್ತು. ಸದರಿ ವಿಚಾರವನ್ನು ನನಗೆ ಹನುಮಂತಪ್ಪ ನವರು 10-12 ವರುಷಗಳ ಹಿಂದೆ ತಿಳಿಸಿರುತ್ತಾರೆ. ಹಾಗಾಗಿ ನನಗೆ ದಾವಾಸ್ತಿಯ ಕುರಿತು ಯಾವುದೇ ವಿಚಾರ ತಿಳಿಯದೇ ಇದ್ದರೂ ಸಹ ವಾದಿಯ ಕೇಳಿಕೆ ಮೇರೆಗೆ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.